ಮೂಲ ದಾವಾ ನಂ.44/2020

ಡಿ.ಡಬ್ಲ್ಯೂ-1

ದಿನಾಂಕ 01-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಶ್ರೀ ಎ ಪಿ ಹೆಚ್ ವಕೀಲರಿಂದ ಃ**

ಈ ದಾವೆಯನ್ನು ವಾದಿಯನ್ನು ಯಾವ ಆಸ್ತಿಗೆ ಸಂಬಂಧಿಸಿದಂತೆ ಹೂಡಿದ ಬಗ್ಗೆ ನನಗೆ ಮಾಹಿತಿ ಇದೆ . ಬೊಮ್ಮನಳ್ಳಿ ಗ್ರಾಮದ ಸರ್ವೆ ನಂಬರ 1/1 ಪೋಡಿ ಆದ ನಂತರ ಸರ್ವೆ ನಂಬರ 1/28/, 1/29, 1/30 ಆಗಿರುತ್ತದೆ ಎಂದರೆ ನಾಲ್ಕು ಭಾಗ ಆಗಿರುತ್ತದೆ . ನನ್ನ ತಂದೆ 2001 ನೇ ಸಾಲಿನಲ್ಲಿ ಎರಡು ಗುಂಟೆ ಎಂಟಾಣೆ ಜಾಗೆಯನ್ನು ವಾದಿಯಿಂದ ಖರೀದಿಸಿರುತ್ತಾರೆ ಎಂದರೆ ಸರಿ . ನಾನು ಖರೀದಿಸಿದ ಜಾಗ ಈಗ ಸರ್ವೆ ನಂಬರ 1/29 ಆಗಿರುತ್ತದೆ ಎಂದರೆ ಸರಿ . ಈಗ ನನ್ನ ತಾಬಾದಲ್ಲಿ ಯಾವುದೇ ಜಮೀನು ತಾಬಾದಲ್ಲಿ ಇರುವುದಿಲ್ಲ .

2. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿ.ಡಿ-1 ಮತ್ತು 4 ನಕ್ಷೆಗಳು 2005 ನೇ ಸಾಲಿಗೆ ಸೇರಿರುತ್ತದೆ ಎಂದರೆ ಸರಿ . 2005 ರ ನಕಾಶೆ ರದ್ದಾಗಿರುತ್ತದೆ ಎಂದರೆ ಸಾಕ್ಷಿಯು ಅದು ಇನ್ನೂ ಚಾಲ್ತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ . ನಿ.ಪಿ-2 ರ ನಕಾಶೆ ಪ್ರಕಾರ ನಾನು ಈಗ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಇರುವುದಿಲ್ಲ . ನಿ.ಪಿ-2 ನಕ್ಷೆಯಲ್ಲಿ ಬಣ್ಣದಲ್ಲಿ ಕಾಣುತ್ತಿರುವ ಎಂಟು ಗುಂಟೆ ವಾದಿಯ ಜಾಗೆಯನ್ನು ನಾನು ಅತೀಕ್ರಮಣ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಿ.ಪಿ-2 ನಕ್ಷೆಯನ್ನು ಪ್ರಶ್ನಿಸಿ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ . ಸದ್ರಿ ಮೇಲ್ಮನವಿಯು ನನ್ನ ಮಾಹಿತಿ ಪ್ರಕಾರ ನಿ .ಪಿ-2 ನಕ್ಷೆಯನ್ನು ರದ್ದುಪಡಿಸಲಾಗಿದೆ . ನಿ.ಡಿ-5 ದಾಖಲೆ ಪ್ರಕಾರ ನಿ .ಪಿ-2 ನಕ್ಷೆ ರದ್ದಾಗಿರುತ್ತದೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ . ನಿ.ಡಿ-5 ರ ಆದೇಶ ನಿ.ಪಿ-2 ನಕಾಶೆಗೆ ಸಂಬಂಧಿಸಿದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಿ.ಡಿ-5 ಆದೇಶ ಪೋರ್ಟ ಹಿಸ್ಸಾಗೆ ಸಂಬಂಧಿಸಿದ್ದು ನಕಾಶೆಗೆ ಸಂಬಂಧಿಸಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ-5 ಆದೇಶದಲ್ಲಿ ನಿ .ಪಿ-2 ನಕಾಶೆಯ ಬಗ್ಗೆ ಎಲ್ಲೂ ಉಲ್ಲೇಖ

ಆಗಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರಿದು ಆದೇಶದಲ್ಲಿ ನಕಾಶೆ ತಯಾರು ಮಾಡಿದ ವ್ಯಕ್ತಿಯ ಹೆಸರು ಉಲ್ಲೇಖ ಆಗಿರುತ್ತದೆ ಎಂದು ನುಡಿಯುತ್ತಾರೆ . ಈಗ ಸಾಕ್ಷಿಗೆ ನಿ.ಪಿ-2 ನ್ನು ತೋರಿಸಲಾಗಿ ಅದರಲ್ಲಿ ನಕಾಶೆಯನ್ನು ತಯಾರು ಮಾಡಿದ ವ್ಯಕ್ತಿಯ ಹೆಸರು ಜಿ .ಆರ್ ನಾಯ್ಕ ತಾಲೂಕ ಸರ್ವೆಯರ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ . ನಿ.ಡಿ-5 ಆದೇಶವು ಯಾವ ಸಾಲಿನ ಪೋಟ ಹಿಸ್ಸಾವನ್ನು ಪ್ರಶ್ನಿಸಿ ನಮೂದು ಮಾಡಿರುತ್ತಾರೆ ಎಂದರೆ ಮಾಡಿರುವುದಿಲ್ಲ . ನಿ.ಡಿ-5 ಆದೇಶವನ್ನು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮಾಡಿರುತ್ತಾರೆ ಎಂದರೆ ಸರಿ . ನಿ.ಪಿ-2 ನಕಾಶೆಯನ್ನು ಮೋಜಿನಿ ಹುಕುಂ ಜಿಲ್ಲಾಧಿಕಾರಿಗಳ ಆದೇಶದ ಮೇಲೆ ಮಾಡಿರುತ್ತಾರೆ ಎಂದರೆ ಸರಿ . ಆದ ಕಾರಣ ನಿ.ಪಿ-2 ನ್ನು ಪ್ರಶ್ನಿಸಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ .

3. 2011 ರಿಂದ ದಾವಾಸ್ತಿಯನ್ನು ಬಿಟ್ಟುಕೊಡಲು ವಾದಿ ನನ್ನ ತಂದೆಗೆ ಮನವಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ . 2013 ನೇ ಸಾಲಿನಲ್ಲಿ ನನ್ನ ತಂದೆ ವಾದಿಗೆ ದಾವಾಸ್ತಿಯನ್ನು ಖರೀದಿ ಕೊಡಲು ಮನವಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಆ ಕಾಲಕ್ಕೆ ವಾದಿಯವರು ಖರಿದಿಗೆ ಕೊಡಲು ಆಗುವುದಿಲ್ಲ ಆದರೆ ಎರಡು ವರ್ಷ ಕಾಲಾವಕಾಶ ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ . ಆದರೆ ನನ್ನ ತಂದೆ ಮತ್ತು ನಾನು ದಾವಾಸ್ತಿಯನ್ನು ವಾದಿಗೆ ಬಿಟ್ಟುಕೊಡಲು ಕಾಲಾವಕಾಶವನ್ನು ಕೋರುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ . ವಾದಿ ಮತ್ತು ಪ್ರತಿವಾದಿಯ ನಡುವೆ ದಾವಾಸ್ತಿಗೆ ಸಂಬಂಧಿಸಿದ ಮಾತುಗಳು ನನ್ನ ತಂದಗೆ ಮಾತ್ರ ಗೊತ್ತು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ನನ್ನ ಬಳಿ ಹೇಳಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ .

4. ಜನೇವರಿ 2020 ರಲ್ಲಿ ನನ್ನ ತಂದೆ ತಕ್ಷಣ ದಾವಾಸ್ತಿಯಲ್ಲಿ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿಯಲ್ಲ . ಈಗ ಸಾಕ್ಷಿಗೆ ನಿ.-5 ಮತ್ತು 6 ರ ಛಾಯಾ ಚಿತ್ರಗಳನ್ನು ತೊರಿಸಿ ಅದರಲ್ಲಿರುವ ಕಟ್ಟಡ ನನ್ನ ಸ್ವಾದೀನಲ್ಲಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ . ನಿ.ಪಿ-5 ಮತ್ತು 6 ಛಾಯಾಚಿತ್ರಗಳಲ್ಲಿ ಹೊಸದಾಗಿ

ಮೂಲ ದಾವಾ ನಂ.44/2020

ಡಿ.ಡಬ್ಲ್ಯೂ-1

ಕಟ್ಟುವ ಕಟ್ಟಡ ಕಂಡುಬರುತ್ತದೆ ಎಂದರೆ ಸರಿಯಲ್ಲ . ನಾನು ಆ ರೀತಿ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ ತಕ್ಷಣ ವಾದಿಗೆ ಸಂಬಂಧಸಿದ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ವಾದಿಗೆ ಬಿಟ್ಟು ಕೊಡಲು ನಾನು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾವಾಸ್ತಿಯ ಸ್ವಾಧಿನ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ . ದಾವಾಸ್ತಿಯ ಮಾಲೀಕರು ವಾದಿ ಎಂದು ನಾನು ಒಪ್ಪುತ್ತೇನೆ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ . ನನ್ನ ಪ್ರಕಾರ ದಾವಾಸ್ತಿಯ ಮಾಲೀಕರು ರಮಾಕಾಂತ ಸೀತರಾಮ ಹೆಗಡೆ ರವರು ಆಗಿರುತ್ತಾರೆ . ಸದ್ರಿ ರಮಾಕಾಂತ ಸೀತರಾಮ ಹೆಗಡೆ ರವರು ದಾವಾಸ್ತಿಯ ಮಾೀಲಿಕರು ಎಂದು ಪ್ರತಿವಾದ ಪತ್ರದಲ್ಲಿ ನಾನು ಎಲ್ಲೂ ಕಾಣಿಸಿರುವುದಿಲ್ಲ . ನಾನು ದಾವಾಸ್ತಿಯ ಸ್ವಾಧಿನವನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ವಿಭಿನ್ನ ವಾಗಿ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ನುಡಿಯುುತ್ತಿದ್ದೆನೆ ಎಂದರೆ ಸರಿಯಲ್ಲ .

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

**ಓ.ಹೆ.ಕೆ.ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಶಿರಸಿ.**